ಮಿಸ್ 1/2023 ಆರ್ .ಡಬ್ಲ್ಯೂ1

ಇಂದು ದಿಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಸ್ ಡಿ ವಕೀಲರಿಂದಃ

ನಮ್ಮ ತಂದೆ ಮನೆಯ ಮೈಸೂರಿನ ಇಲವಾಲದ ಮುಂದೆ ತಾಜಾ ತಿಂಡಿ ಹೊಟೇಲ ನ ಹಿಂಭಾಗದಲ್ಲಿ ಇದೆ. ಅಸಲು ದಾವೆಯಲ್ಲಿ ಕುಮಾರ್ ರವರ ಎರಡನೇ ವಿಳಾಸವು ಅರ್ಜಿದಾರರ 2ನೇ ವಿಳಾಸ ಎಂದರೆ ಸರಿ. ನಾನು ಮೈಸೂರಿಗೆ ಬಂದಾಗ ತಂದೆ ಮನೆಯಲ್ಲಿ ಇರುತ್ತೇನೆ. ನನ್ನ ತಂದೆ ಮೃತಪಟ್ಟಿರುತ್ತಾರೆ ತಾಯಿ ಮತ್ತು ತಮ್ಮ ಇರುತ್ತಾರೆ. ನನ್ನ ತಮ್ಮ ಮಂಜುನಾಥ ಬಿಟ್ಟು ಒಬ್ಬ ಅಣ್ಣ ಇದ್ದಾನೆ. ಬೆಂಗಳೂರಿಂದ ಮೈಸೂರಿಗೆ ಬಂದಾಗ ಕೆಲವೊಮ್ಮ ನನ್ನ ಅಣ್ಣನ ಮನೆಗೆ ಹೋಗುತ್ತೇನೆ. ನನ್ನ ಮತ್ತು ಅಣ್ಣಂದಿರ ನಡುವೆ ಒಳ್ಳೆಯ ಬಾಂಧವ್ಯ ಇದೆ. ಕುಮಾರ್ ಮತ್ತು ಮಂಜುನಾಥ ಒಳ್ಳೆಯ ಸ್ನೇಹಿತರು. ಕುಮಾರ್ ಮತ್ತು ಮಂಜುನಾಥ ಸೇರಿ ಹೊಟೇಲ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಕುಮಾರ್ ರವರ ಹೊಟೇಲ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನನ್ನ ತಮ್ಮ ಸಹಾಯ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಹೊಟೇಲ್ ವ್ಯವಹಾರಕ್ಕಾಗಿ ಮಂಜುನಾಥ ನನ್ನಿಂದ ಹ ಣ ಪಡೆದು ಕಮಾರ್ ಗೆ ಕೊಟ್ಟಿದ್ದಾರೆ ಎಂದರೆ ನನ್ನಿಂದ ಪಡೆದಿಲ್ಲ. ಅದೆ ರೀತಿ ಹೊಟೇಲ್ ವ್ಯಾಪಾರಕ್ಕಾರಿ ಮಂಜುನಾಥ ಪಡೆದ ಸಾಲಕ್ಕೆ ಕುಮಾರ್ ಅವರ ಆಸ್ತಿಯನ್ನು ಅಡಮಾನವಾಗಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕುಮಾರ್ ನನ್ನ ಬಳಿ ಬಂದು ಯಾವತ್ತು ಸಹ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣ ದಾಖಲು ಮಾಡುವ ವಿಚಾರವನ್ನು ನನ್ನ ತಮ್ಮನಿಗೆ ಹೇಳಿಲ್ಲ. ದಾವೆ ದಾಖಲು ಮಾಡಿದ ನಂತರ ನನ್ನ ತಮ್ಮನಿಗೆ ಗೊತ್ತಾಯಿತು ಎಂದರೆ ಇರಬಹುದು. ತೀರ್ಪು ಆದ ನಂತರ ಈ ರೀತಿ ತೀರ್ಪು ಆಗಿದೆ ಎಂದು ನಾನೆ ನನ್ನ ತಮ್ಮನಿಗೆ ಹೇಳಿದ್ದೆ ಎಂದರೆ ಸರಿಯಲ್ಲ . ಆಸ್ತಿಯ ಮಾರಾಟದ ಬಗ್ಗೆ ಮಂಜುನಾಥ ನನ್ನನ್ನು ಬೇಟಿ ಆದರು ಎಂದರೆ ಸರಿಯಲ್ಲ. ಕುಮಾರ್ ರವರ ಆರೋಗ್ಯ ಹೇಗಿದೆ, ಏನೆಲ್ಲ ವ್ಯವಹಾರ ಆಗುತ್ತಿದೆ ಎಂದು ಕುಮಾರ್ ರವರಿಂದ ನನಗೆ ಗೊತ್ತಾಗುವುದಲ್ಲ. ನಾನು ದಾವಾ ಸಲ್ಲಿಸುವ ಸಮಯದಲ್ಲಿ ಕುಮಾರ್ ರವರ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಿಲ್ಲ. ದಾವೆಯನ್ನು ನೊಟೀ ಸು ಹೋದಾಗ ಕುಮಾರಿ ರವರಿಗೆ ವೈದ್ಯರ ಸಲಹೆಯಂತೆ ಕುಮಾರ್ ಗೆ ವಿಶ್ರಾಂತಿ . ಕುಮಾರ್ ನನ್ನ ತಮ್ಮನ ಮೂಲಕ ಪರಿಚಯ. ಜಮೀನು ಕುರಿತಂತೆ ಆದ ಪತ್ರ ವ್ಯವಹಾರ ನನ್ನ ತಮ್ಮನ ಮೂಲಕ ಮಾಡಿದ್ದೆ ಎಂದರೆ ಸರಿಯಲ್ಲ. ಬಡ್ಡಿ ರೂಪದಲ್ಲಿ ನ್ನ್ನ ತಮ್ಮ ಮತ್ತು ಕುಮಾರ್ ಹಾಕಿದ್ದಾರೆ ಎಂದರೆ ಸರಿಯಲ್ಲ. ಹೊಟೇಲ್ ಕುಮಾರ್ ರವರ ಅಕ್ಕ ತಂಗಿಯರ ಜಂಟಿ ಕೂಟಂಬದ ಆಸ್ತಿ ಎಂದರೆ ಬೇರೆ ಆಗಿದ್ದೇವೆ ಹೂಟೇಲ್ ನನ್ನ ಹೆಸರಿಗೆ ಆಗಿದೆ ಎಂದು ಹೇಳಿದ್ದಾರೆ.

ಜಾರಿ ಅರ್ಜಿಯನ್ನು ಯಾವ ವರ್ಷ ಸಲ್ಲಿಸಿದ್ದೆ ಎಂದು ಗೊತ್ತಿಲ್ಲ. ಈ ಅರ್ಜಿ ಸಲ್ಲಿಸಿದ ಮೂರು ತಿಂಗಳ ನಂತರ ನಾವು ಜಾರಿ ಅರ್ಜಿಯನ್ನು ದಿನಾಂಕ 29.03.2023 ರಲ್ಲಿ ಸಲ್ಲಿಸಿದ್ದೇನೆ ಎಂದರೆ ದಿನಾಂಕ ಮರೆತು ಹೋಗಿದೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನಾನು ಜಾರಿ ಅರ್ಜಿ ಸಲ್ಲಿಸಿದ ನಂತರ ಈ ಅರ್ಜಿ ಸಲ್ಲಿಸಿದ್ದೇನೆ ಎನ್ನುವುದು ತಿಳಿಸಿದ್ದೇನೆ ಎಂರದೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 130/2022 ರ ತೀರ್ಪು ಕುಮಾರ್ ಗೆ ನನ್ನ ತಮ್ಮನ ಮೂಲಕ ತಿಳಿಸಿದ ಎಂದರೆ ಸರಿಯಲ್ಲ. ತಿರ್ಪು ಆದ 1 ತಿಂಗಳ ಒಳಗೆ ಈ ಅರ್ಜಿ ಸಲ್ಲಿಕೆ ಆಗಿದೆ ಎಂದರೆ ಸರಿಯಲ್ಲ. ಆ ದಾವೆಯ ಸಮನ್ಸ ಕುಮಾರ್ ಗೆ ಜಾರಿ ಆದ ತಕ್ಷಣ ಅವರು ನನ್ನ ತಮ್ಮನಿಗೆ ಕ ರೆ ಮಾಡಿ ತಮಗೆ ಸಮನ್ಸ ಬಂದ ವಿಚಾರ ಹೇಳಿದ್ದರು ಎಂದರೆ ಗೊತ್ತಿಲ್ಲ. ಕುಮಾರ್ ರವರ ಅನಾರೋಗ್ಯದಿಂದ ಬಳಲುತ್ತಿದ್ದು ಮತ್ತು ನೀವಿಬ್ಬರು ಹಣ ಕೊಟ್ಟರೆ ಪ್ರಕರಣ ಹಿಂದಕ್ಕೆ ಪಡೆಯುತ್ತೇನೆ ಎಂಬುದು ಸರಿಯಲ್ಲ. ತಕ್ಷಣ ನನ್ನ ಅಕ್ಕ ಸಾಲಕ್ಕಾಗಿ ಪಡೆದ ಹಣದ ಸಂಬಂಧ ದಾವೆಯಲ್ಲಿ ಕುಮಾರ್ ಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ತಕ್ಷಣ ಕುಮಾರ್ ನನ್ನನ್ನು ಬೇರಿ ಮಾಡಿ ಹೊಟೇಲ್ ವೃದ್ದಿಗೆ ಪಡೆದ ಹಣವನ್ನು ನಾನು ವಾಪಸ್ಸ ಕೊಡುತ್ತೇನೆ ನಾನು ಪ್ರಕರಣ ವಾಪಸ್ಸು ಪಡೆಯುತ್ತೇನೆ ಎಂದು ಹೇಳಿದ್ದಾರು ಎಂದರೆ ಸರಿಯಲ್ಲ. ಆವಾಗ ಹಣವನ್ನು ವಾಪಸ್ಸು ಹೊಂದಿಸಿ ಕೊಟ್ಟರೆ ಪ್ರಕರಣ ವಾಪಸ್ಸು ಪಡೆಯುತ್ತೇನೆ ಎಂದು ನಾನು ನನ್ನ ತಮ್ಮನಿಗೆ ಹೇಳಿದ್ದ ಎಂದರೆ ಸರಿಯಲ್ಲ. ನನ್ನ ತಮ್ಮನೆ ಕೊಟ್ಟ ಭರವಸೆ ಮೇರೆಗೆ ಮತ್ತು ಅರ್ಜಿದಾರರ ಅನಾರೋಗ್ಯದ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಬರಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 130/2022 ಮತ್ತೊಮ್ಮೆ ವಿಚಾರಣೆ ಆದರೆ ನನಗೆ ಏನು ತೊಂದರೆ ಇಲ್ಲ. ಕುಮಾರ್ ರವರ ಆಸ್ತಿಯನ್ನು ಅಕ್ರಮವಾಗಿ ಕಬಳಿಸಲು ಸುಳ್ಳು ದಾವರಾ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.